C.R.P.67

Form No.4 (Civil)
Deposition Sheets
(R.P.No.57)

**6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್ ಸಿ ಸಂಖ್ಯೆಃ 202/2022**

**ಪ್ರಾಸಾ. 1 ಚಾಸಾ. 6**

**ಸಾಕ್ಷಿ ದಾರರ ಹೆಸರು** : ಶ್ರೀಲಕ್ಷ್ಮೀ ಜಿ.ಡಿ.

**ಗಂಡನ ಹೆಸರು** : ಯೋಗಾನಂದ

**ವಯಸ್ಸು** : 31 ವರ್ಷಗಳು

**ಉದ್ಯೋಗ** : ಮಹಿಳಾ ಮುಖ್ಯಪೇದೆ, ವಿವಿಪುರಂ ಪೊಲೀಸ್ ಠಾಣೆ

**ವಾಸ** : ಸುಂಕದಕಟ್ಟೆ, ಬೆಂಗಳೂರು.

**ಪ್ರಮಾಣ ವಚನ ಬೋಧಿಸಿದ ದಿನಾಂಕಃ 05.11.2025**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ನಾನು ಫೆಬ್ರವರಿ 2020 ರಿಂದ ಜುಲೈ 2025 ರವರೆಗೆ ಬ್ಯಾಡರಹಳ್ಳಿ ಪೊಲೀಸ್ ಠಾಣೆಯಲ್ಲಿ ಮಹಿಳಾ ಪೊಲೀಸ್ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ನ್ಯಾಯಾಲಯದ ಮುಂದೆ ಇರುವ 1 ಮತ್ತು 2 ನೇ ಆರೋಪಿತರು ಗೊತ್ತು. ನನಗೆ ಚಾಸಾ-1 ರಿಂದ 5 ಮತ್ತು 7 ರವರು ಗೊತ್ತು. ದಿನಾಂಕ 21.04.2022 ರಂದು ಚಾಸಾ-1 ರವರು ನನ್ನನ್ನು ಹಾಗೂ ಚಾಸಾ-4 ರಿಂದ 5 ಮತ್ತು 7 ರವರನ್ನು ಕರೆದು, ವೀರಭದ್ರೇಶ್ವರ ನಗರದ ಪ್ರಸನ್ನ ಲೇಔಟ್ ನಲ್ಲಿರುವ ಮನೆ ನಂ. 8/5 ಎರ 1 ನೇ ಮಹಡಿಯಲ್ಲಿರುವ ಮನೆಯಲ್ಲಿ ವೇಶ್ಯಾವಾಟಿಕೆ ದಂಧೆ ನಡೆಸುತ್ತಿರುವ ಬಗ್ಗೆ ಬಾತ್ಮಿ ಬಂದಿರುವ ಬಗ್ಗೆ ತಿಳಿಸಿರುತ್ತಾರೆ. ಈ ಬಗ್ಗೆ ಮೇಲಧಿಕಾರಿಗಳಿಂದ ಅನುಮತಿ ಪಡೆದುಕೊಂಡಿದ್ದು, ದಾಳಿ ಮಾಡ

ಬೇಕಾಗಿದೆ ಎಂದು ಚಾಸಾ-2 ಮತ್ತು 3 ರವರನ್ನು ಪಂಚರಾಗಲು ಕೋರಿ ಅವರಿಗೆ ನೋಟಿಸ್ ನೀಡಿರುತ್ತಾರೆ. ನಂತರ ದಾಳಿ ಸಮಯದಲ್ಲಿ ತನಿಖೆಗೆ ಬೇಕಾದ ಎಲ್ಲಾ ಸಾಮಗ್ರಿಗಳೊಂದಿಗೆ ಇಲಾಖಾ ವಾಹನದಲ್ಲಿ ಚಾಸಾ-1 ರವರು ಹೊರಟಿದ್ದು, ನಾವುಗಳು ದ್ವಿಚಕ್ರ ವಾಹನದಲ್ಲಿ ಮಧ್ಯಾಹ್ನ 2.15 ಗಂಟೆ ಸಮಯಕ್ಕೆ ಬಾತ್ಮಿದಾರರು ತೋರಿಸಿದ ಮನೆಯ ಬಳಿಗೆ ಹೋಗಿರುತ್ತೇವೆ. ಸುಮಾರು 2030 ಗಂಟೆ ಸಮಯದಲ್ಲಿ ಚಾಸಾ-1 ರವರ ನೇತೃತ್ವದಲ್ಲಿ ಸದರಿ ಮನೆಯ ಮೇಲೆ ದಾಳಿ ಮಾಡಿ, ಒಳಗೆ ಹೋಗಿ ನೋಡಲಾಗಿ, ಹಾಲ್‌ನಲ್ಲಿ ಇಬ್ಬರು ಮಹಿಳೆಯರು ಕುಳಿತಿದ್ದು ಹಾಗೂ ರೂಮ್‌ನ ಒಳಗೆ ಹಾಸಿಗೆ ಮೇಲೆ ಒಬ್ಬರು ಯುವತಿ ಕುಳಿತಿದ್ದರು. ಆಕೆಯ ಪಕ್ಕದಲ್ಲಿ ಒಬ್ಬ ಯುವಕ ಅರೆಬೆತ್ತಲಾಗಿ ಕುಳಿತಿದ್ದನು. ಚಾಸಾ-1 ರವರು ಇವರುಗಳನ್ನು ವಶಕ್ಕೆ ಪಡೆದು, ಹೆಸರು ವಿಳಾಸ ಕೇಳಲಾಗಿ, ಅವರು ಪುಷ್ಪ ಮತ್ತು ಅನ್ನಪೂರ್ಣ ಎಂದು ತಿಳಿಸಿರುತ್ತಾರೆ. ನಂತರ ಸ್ಥಳದಲ್ಲಿರುವ ಬಗೆ ವಿಚಾರಿಸಲಾಗಿ, ಅವರುಗಳು ಸ್ನೇಹಿತರಾಗಿದ್ದು ಹೆಚ್ಚಿ ನ ಹಣ ಸಂಪಾದನೆ ಮಾಡುವ ಉದ್ದೇಶದಿಂದ ಹಣಕಾಸಿನ ತೊಂದರೆಯಲ್ಲಿರುವ ಯುವತಿಯರನ್ನು ಪರಿಚಯಮಾಡಿಕೊಂಡು, ಪುಸಲಾಯಿಸಿ, ಇಲ್ಲಿಗೆ ಕರೆದುಕೊಂಡು ಬಂದು, ಗಿರಾಕಿಗಳನ್ನು ಸಂಪರ್ಕಿಸಿ ಅವರಿಂದ ಹಣ ಪಡೆದು ಈ ಮನೆಯಲ್ಲಿ ವೇಶ್ಯಾವಾಟಿಕೆ ನಡೆಸಿ ಹಣ ಸಂಪಾದನೆ ಮಾಡುತ್ತಿರುವುದಾಗಿ ತಿಳಿಸಿರುತ್ತಾರೆ. ರೂಮ್ ನಲ್ಲಿದ್ದ ಹುಡುಗಿಯ ಬಗ್ಗೆ ವಿಚಾರಿಸಲಾಗಿ, ಆಕೆಯನ್ನು ಹೆಚ್ಚಿ ನ ಸಂಬಳವಿರುವ ಕೆಲಸ ಕೊಡಿಸುವುದಾಗಿ ಆಮಿಷ ತೋರಿಸಿ, ಈ ದಿನ ಕರೆಸಿರುವುದಾಗಿಯು, ಆಕೆಯೊಂದಿಗೆ ಇದ್ದ ಮಂಜುನಾಥ ಎಂಬ ಗಿರಾಕಿಯಿಂದ ರೂ.1,200/- ಹಣ ಪಡೆದು, ಆಕೆಯೊಂದಿಗೆ ಕಳುಹಿಸಿರುವುದಾಗಿ ತಿಳಿಸಿರುತ್ತಾರೆ. ನಂತರ ಚಾಸಾ-1 ರವರು ನನ್ನ ಹಾಗೂ ಚಾಸಾ-7 ರವರ ಮೂಲಕ ಆರೋಪಿತರ ಅಂಗಶೋಧನೆ ಮಾಡಿಸಲಾಗಿ, ಅವರ ಬಳಿ ಇದ್ದ ಒಂದು ಓಪೋ ಕಂಪನಿಯ ಮೊಬೈಲ್, ರೂ.1,200/- ಹಣ, ನಾಲ್ಕು ಕಾಂಡೋಮ್ ಪ್ಯಾಕೇಟ್ ಗಳನ್ನು ಚಾಸಾ-1 ರವರು ವಶಕ್ಕೆ ಪಡೆದುಕೊಂಡು, ಕೋಣೆಯಲ್ಲಿದ್ದ ಯುವತಿಯನ್ನು ವಿಚಾರಣೆ ಮಾಡಿದಾಗ ಆಕೆಯು ಆರೋಪಿತರಿಬ್ಬರು ತನ್ನನ್ನು ಹೆಚ್ಚಿ ನ ಸಂಬಳ ಇರುವ ಕೆಲಸ ಕೊಡಿಸುವುದಾಗಿ ಹೇಳಿ ಇಲ್ಲಿಗೆ ಪುಸಲಾಯಿಸಿ ಕರೆಸಿಕೊಂಡು,

ವೇಶ್ಯಾ ವಾಟಿಕೆಗೆ ತೊಡಗಿಸಿರುವುದಾಗಿ ತಿಳಿಸಿರುತ್ತಾರೆ. ನಂತರ ಗಿರಾಕಿಯಾದ ಮಂಜುನಾಥನನ್ನು ಚಾಸಾ-1 ರವರ ವಿಚಾರಿಸಿದಾಗ, ಆತನು ಸಹ ಆರೋಪಿತರು ತನ್ನಿಂದ ರೂ.1,200/- ಹಣ ಪಡೆದುಕೊಂಡು ಶ್ವೇತಾಳೊಂದಿಗೆ ಲೈಂಗಿಕ ಕ್ರಿಯೆ ನಡೆಸಲು ಅವಕಾಶ ಮಾಡಿಕೊಟ್ಟಿರುವುದಾಗಿ ತಿಳಿಸಿರುತ್ತಾನೆ. ನಂತರ ಚಾಸಾ-1 ರವರು ಸ್ಥಳದಲ್ಲಿ ಮಹಜರ್ ಜರುಗಿಸಿ, ಎರಡು ಮೊಬೈಲ್ ಗಳನ್ನು, ನಾಲ್ಕು ಕಾಂಡೋಮ್ ಪ್ಯಾಕೇಟ್ ಗಳನ್ನು ಹಾಗೂ ರೂ.1,200/- ನಗದನ್ನು ಅಮಾನತುಪಡಿಸಿಕೊಂಡಿರುತ್ತಾರೆ. ಸದರಿ ಮಹಜರ್ ಗೆ ನಾನು ಸಹ ಸಹಿ ಮಾಡಿರುತ್ತೇನೆ. ಸಾಕ್ಷಿ ದಾಳಿ ಪಂಚನಾಮೆಯಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು, ದಾಳಿ ಪಂಚನಾಮೆಯನ್ನು ನಿಶಾನೆ ಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ-1(ಎ) ಎಂದು ಗುರುತಿಸಲಾಯಿತು. ಅಮಾನತು ಪಡಿಸಿಕೊಂಡ ವಸ್ತುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ವಿವೋ ಕಂಪನಿಯ ಮೊಬೈಲ್ ನ್ನು ಮುದ್ದೆಮಾಲು-1 ಎಂದು, ಓಪ್ಪೋ ಕಂಪನಿಯ ಮೊಬೈಲ್ ನ್ನು ಮುದ್ದೆಮಾಲು-2 ಎಂದು, ನಾಲ್ಕು ಕಾಂಡೋಮ್ ಪ್ಯಾಕೇಟ್ ಗಳನ್ನು ಮುದ್ದೆಮಾಲು-3 ಎಂದು ಗುರುತಿಸಲಾಯಿತು. (ಸದರಿ ವಸ್ತುಗಳನ್ನು ಪ್ರತ್ಯೇಕವಾದ ಬಿಳಿ ಬಟ್ಟೆಯಲ್ಲಿ ಸೀಲು ಮಾಡಿದ್ದು, ಅವುಗಳನ್ನು ಸರ್ಕಾರಿ ಅಭಿಯೋಜಕರ ಮನವಿ ಮೇರೆಗೆ, ಸೀಲ್ ನ್ನು ಒಡೆದು ಸಾಕ್ಷಿಗೆ ತೋರಿಸಿ ನಂತರ ಮುದ್ದೆಮಾಲಾಗಿ ಗುರುತಿಸಲಾಯಿತು.)

**ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಸರ್ಕಾರಿ ಅಭಿಯೋಜಕರು ಸಮಯಾವಕಾಶ ಕೋರಿದ್ದು, ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸ. ಒ.

(ದೇವಾನಂದ)
6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.